ದಿನಾಂಕ:04.04.2020ರಂದು ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ವೀಡಿಯೋ ಕಾನ್ಫರೆನ್ಸ್‌ನಲ್ಲಿ ಸಮಗ್ರ ಮಕ್ಕಳ ರಕ್ಷಣಾ ಇಲಾಖೆಗೆ ಸಂಬಂಧಪಟ್ಟಂತೆ ಅನ್ವಯವಾಗುವ ನಿರ್ದೇಶನಗಳನ್ನು ಕೆಳಕಂಡಂತೆ ಸೂಚಿಸಲಾಗಿದೆ. ಸದರಿ ನಿರ್ದೇಶನಗಳನ್ನು ಅನುಪಾಲಿಸಲು ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಿಗೆ ಸೂಚಿಸಲಾಗಿದೆ.

1) ಗುಲ್ಬರ್ಗಾ ಜಿಲ್ಲೆಗೆ ಸಂಬಂಧಿಸಿದಂತೆ ಮಾನ್ಯ ಇಲಾಖಾ ಸಚಿವರು ಸೂಚಿಸಿರುವ ಪೋಕ್ಸೋ ಪ್ರಕರಣದ ಎಫ್‌ಐಆರ್ ಕಾಪಿಯೊಂದಿಗೆ ವಿವರವಾದ ವರದಿಯನ್ನು ದಿನಾಂಕ5.04.2020ರೊಳಗೆ ಸಲ್ಲಿಸಲು ಸೂಚಿಸಿದೆ.
2) ಕೋವಿಡ್–19 ಹರಡುವಿಕೆಯನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ ಮಕ್ಕಳ ಹಿತದೃಷ್ಟಿಯಿಂದ ಹಾಗೂ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಆರೋಗ್ಯದ ಹಿತದೃಷ್ಟಿಯಿಂದ ಕೈಗೊಂಡಿರುವ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮುಖ್ಯವಾಗಿ ಆಯಾ ಜಿಲ್ಲೆಗಳಲ್ಲಿ ಪ್ರೋಆಕ್ಟೀವಾಗಿ ಕೈಗೊಂಡಿರುವಂತಹ ಇನಿಶಿಯೇಟೀವ್‌ಗಳ ಬಗ್ಗೆ ಡಾಕ್ಯುಮೆಂಟೇಷನ್ ಮಾಡಲು ಸೂಚಿಸಿರುತ್ತಾರೆ. ಅದರಂತೆ ಪೋಟೋ ಮತ್ತು ವೀಡಿಯೋಗಳನ್ನು ಒಳಗೊಂಡಂತೆ ಕೋವಿಡ್–19 ನಿವಾರಣೆ ಸಲುವಾಗಿ ಯಾವುದಾದರೂ ಉತ್ತಮ ಪ್ರಯತ್ನವಿದ್ದರೆ ಅದರ ಕುರಿತು ಡಾಕ್ಯುಮೆಂಟೇಷನ್ ಮಾಡಲು ಮಾನ್ಯ ಇಲಾಖಾ ಸಚಿವರು ಸೂಚಿಸಿದ್ದು, ಅದರಂತೆ ಕ್ರಮವಹಿಸುವುದು. (ಸರ್ಕಾರಿ ಮತ್ತು ಸರ್ಕಾರೇತರ ಎಲ್ಲಾ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ)
3) ದಿನಾಂಕ:05.04.2020ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳು ಸೂಚಿಸಿರುವಂತೆ ರಾತ್ರಿ 9 ಗಂಟೆಗೆ ಪ್ರಾರಂಭಿಸಿ 9 ನಿಮಿಷಗಳವರೆಗೆ ಕ್ಯಾಂಡಲ್, ದೀಪ ಅಥವಾ ಮೊಬೈಲ್ ಟಾರ್ಚ್‌ಲೈಟ್ ಮೂಲಕ ಬೆಳಕನ್ನು ಬೆಳಗಿಸಿ ಕೋವಿಡ್–19 ವಿರುದ್ಧ ಎಲ್ಲಾ ದೇಶಜನರ ಐಕ್ಯಮತ್ಯವನ್ನು, ದೇಶೀಯರಲ್ಲಿ ಸಮನ್ವಯ ಮತ್ತು ಸಹಕಾರವನ್ನು, ನಾವೆಲ್ಲರೂ ಒಂದು ಎಂಬ ಭಾವನೆಯನ್ನು ವ್ಯಕ್ತಪಡಿಸುವ ಸಲುವಾಗಿ ಕಾರ್ಯಕ್ರಮವನ್ನು ಅನುಪಾಲಿಸಲು ಸೂಚಿಸಿರುತ್ತಾರೆ.

ಆದ್ದರಿಂದ ಮೇಲಿನ ಇಲಾಖಾ ಸಚಿವರ ಸೂಚನೆಗಳನ್ನು ಅನುಪಾಲಿಸಲು ಸೂಚಿಸಿದೆ.

05.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.

REDMI NOTE 8
AI QUAD CAMERA